ದಿನಾಂಕಃ 07-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು :** ಆರೋಪಿ ಪರ ಶ್ರೀ ಎಸ್ ಆರ್ ಎನ್ ವಕೀಲರಿಂದಃ

**7.** ನಾನು ಮಾಂಸಹಾರಿ ಎಂದರೆ ಸರಿ . ನನ್ನ ಪ್ರಕಾರ ಅಮಾನತು ಪಡಿಸಿದ ಮಾಂಸ 5 ಕೆಜಿ 200 ಗ್ರಾಂ ಇತ್ತು. ಸಾಮಾನ್ಯವಾಗಿ ಮಾಂಸವನ್ನು ಇಟ್ಟಾಗ ಮಾಂಸದಲ್ಲಿದ್ದ ನೀರು ಹಾಗೂ ರಕ್ತದ ಅಂಶ ಹೊರಗೆ ಬಂದು ಮಾಂಸದ ತೂಕ ಕಡಿಮೆ ಆಗುತ್ತದೆ ಎಂದರೆ ಸರಿ. ನಾನು ಹೇಳುವಂತಹ ಮಾಂಸವನ್ನು ಪಶು ವೈದ್ಯಕೀಯ ಆಸ್ಪತ್ರೆಗೆ ತೆಗೆದುಕೊಂಡು ಹೋಗಲಾಗಿದೆ. ಅದರಿಂದ ಪಶು ವೈದ್ಯರು ಮಾದರಿ ತೆಗೆದುಕೊಡಲು ಪಶುವೈದ್ಯಾಲಯಕ್ಕೆ ತೆಗೆದುಕೊಂಡು ಒಯ್ದಿದ್ದು. ಪಶು ವೈದ್ಯರು ಬೇರೆ ಬೇರೆ ಭಾಗದ ಮಾಂಸಗಳಿಂದ ಮಾದರಿ ಮಾಂಸ ತೆಗೆಯುತ್ತಾರೆ ಎಂದರೆ ಸಾಕ್ಷಿ ಲಿವರ್ ಮತ್ತು ಹೊಟ್ಟೆ ಭಾಗದ ಮಾಂಸದಿಂದ ಮಾದರಿ ಮಾಂಸ ತೆಗೆಯುತ್ತಾರೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ತೊಡೆ ಭಾಗದ ಮಾಂಸದಿಂದ ಮಾದರಿ ತೆಗೆದಿಲ್ಲ ಎಂದರೆ ನೆನಪಿಲ್ಲ ಎಂದು ನುಡಿಯುತ್ತಾರೆ. ದಿಃ 03-11-2019 ರಂದು ಪಂಚನಾಮೆಯ ಪ್ರಕಾರ ಲಿವರ್ ಭಾಗ, ತೊಡೆಯ ಭಾಗ ಮತ್ತು ಎದೆಯ ಭಾಗದ ಮಾದರಿ ಮಾಂಸ ತೆಗೆದಿದ್ದರು ಎಂದು ಹೇಳಲಾಗಿದೆ ಎಂದರೆ ಸರಿ. ಮಾದರಿ ತೆಗೆದು ಉಳಿದ ಮಾಂಸವನ್ನು ನಮಗೆ ವಾಪಸ್ಸು ಮಾಡಿದ್ದಾರೆ ಎಂದರೆ ಸರಿ. ನಾನು ಹೇಳಿದಂತಹ 5 ಕೆಜಿ 200 ಗ್ರಾಂ ಮಾಂಸದಲ್ಲಿ ಆ ರೀತಿ ಮಾದರಿ ತೆಗೆದ ನಂತರ ತೂಕ ಕಡಿಮೆಯಾಯಿತು. ನನ್ನ ಪ್ರಕಾರ 20 ಗ್ರಾಂ ತೂಕ ಕಡಿಮೆಯಾಯಿತು. ಪಶು ವೈದ್ಯರು 20 ಗ್ರಾಂ ಮಾಂಸ ಮಾದರಿ ತೆಗೆದರು ಎಂದು ತೋರಿಸುವ ದಾಖಲೆ ನನ್ನಲ್ಲಿ ಇಲ್ಲ. ಬಾಕಿ ಮಾಂಸವನ್ನು ನ್ಯಾಯಾಲಯದ ಅನುಮತಿ ಪಡೆದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಮಕ್ಷಮದಲ್ಲಿ ಸುಡಲಾಯಿತು. ನಾನು ಆ ರೀತಿ ಸುಡುವ ಮುಂಚೆ ಆ ಮಾಂಸ ಎಷ್ಟು ತೂಕ ಇತ್ತು ಎಂದು ಅಳತೆ ಮಾಡಿಲ್ಲ. ಆ ಬಗ್ಗೆ ಪಂಚನಾಮೆಯಲ್ಲಿ ತೂಕದ ಬಗ್ಗೆ ನಮೂದಿಸಿಲ್ಲ. ದಿಃ 05-11-2019 ರ ಪುರವಣಿ ಪಂಚನಾಮೆಯಲ್ಲಿ ನನ್ನ ಸಹಿ ಇರುತ್ತದೆ. ಸದ್ರಿ ಪುರವಣಿ ಪಂಚನಾಮೆಯಲ್ಲಿ ಆ ಮಾಂಸವನ್ನು ಯಂತ್ರದಿಂದ ತೂಕ ಮಾಡಲಾಗಿ ಅದರ ತೂಕ 5 ಕೆಜಿ

200 ಗ್ರಾಂ ಎಂದು ಖಾತರಿಪಡಿಸಲಾಯಿತು ಎಂದು ಹೇಳಿದೆ ಎಂದರೆ ಸರಿ. ನನ್ನ ಪ್ರಕಾರ ಮಾದರಿ ತೆಗೆದರು ಕೂಡ ಆ ಮಾಂಸ 5 ಕೆಜಿ 200 ಗ್ರಾಂ ತೂಕಕ್ಕೆ ಉಳಿಯಿತು ಎಂದರೆ ಸಾಕ್ಷಿ ಅದರ ತೂಕ ಕಡಿಮೆಯಾಗಬೇಕಿತ್ತು ಎಂದು ನುಡಿಯುತ್ತಾರೆ. ಆದ್ದರಿಂದ ಆ ಪಂಚನಾಮೆಯಲ್ಲಿ ಅದರ ತೂಕ ಹೇಳಿರುವುದು ಸತ್ಯಕ್ಕೆ ದೂರವಾದ ವಿಚಾರ ಎಂದರೆ ಸರಿ. ನನಗೆ ಯಾವುದೇ ವಸ್ತುವನ್ನು ನೀಡಿ ಅದರ ತೂಕ ವನ್ನು ಅಂದಾಜಿಗೆ ಹೇಳಲು ಹೇಳಿದಾಗ ತೂಕ ಹೇಳಲಾಗುವುದಿಲ್ಲ.

8. ಜಪ್ತು ಪಡಿಸಿಕೊಂಡೆವು ಎಂದು ಹೇಳುವ ಸಮಯದಲ್ಲಿ ನಾವು ಯಾವುದೇ ವ್ಯಾಪಾರಿಗಳನ್ನು ಕರೆದುಕೊಂಡು ಹೋಗಿಲ್ಲ. ಆ ರಾತ್ರಿ ಸಮಯದಲ್ಲಿ ಯಾವುದೇ ತೂಕ ಮಾಡುವ ಯಂತ್ರವನ್ನು ತೆಗೆದುಕೊಂಡು ಹೋದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಆ ಸಮಯದಲ್ಲಿ ತೂಕ ಮಾಡುವ ಯಂತ್ರ ಹಾಗೂ ವ್ಯಾಪಾರಿಗಳು ನಮ್ಮ ಜೊತೆ ಇಲ್ಲದೆ ಇದ್ದುದರಿಂದ ನಾವು ಮಾಸ್ತಿಕಟ್ಟಾ ಕಚೇರಿಗೆ ಬಂದು ತೂಕ ಮಾಡಿ ಆ ತೂಕವನ್ನು ಬರೆದಿರುವುದು. ಬೆಳಿಗ್ಗೆ 7-8 ಗಂಟೆಗೆ ಸಮಯದಲ್ಲಿ ಮಾಸ್ತಿಕಟ್ಟಾ ಕಚೇರಿಯಲ್ಲಿ ಅದನ್ನು ತೂಕ ಮಾಡಿರುವುದು. ಆಗ ಆ ಮಾಂಸ 5 ಕೆಜಿ 200 ಗ್ರಾಂ ತೂಕ ಇರುವುದು ಖಾತ್ರಿಯಾಯಿತು. ನಮ್ಮ ಕಚೇರಿಯಲ್ಲಿ ತೂಕದ ಯಂತ್ರ ಇತ್ತು ಎಂದು ಯಾವುದೇ ದಾಖಲೆಯಲ್ಲಿ ಹೇಳಿಲ್ಲ. ನನ್ನ ಪ್ರಕಾರ ಸ್ಥಳದಲ್ಲಿ ಪಂಚನಾಮೆಯನ್ನು ಬೆಳಿಗ್ಗೆ 6-30 ಯಿಂದ 7-15 ತನಕ ಮಾಡಲಾಗಿರಬಹುದು, ಆದರೆ ಸಮಯ ಸರಿಯಾಗಿ ನೆನಪಿಲ್ಲ. ಆ ಪಂಚನಾಮೆಯಲ್ಲಿ ತೂಕ 5 ಕೆಜಿ 200 ಗ್ರಾಂ ಎಂದು ಯಾವದೇ ಆಧಾರ ಇಲ್ಲದೆ ಹೇಳಿರುವುದು.

9. ನಮ್ಮ ಅರಣ್ಯ ಪ್ರದೇಶದಲ್ಲಿ ಕಾಡುಕುರಿಗಳು ಎಷ್ಟು ಇವೆ ಎಂಬ ಬಗ್ಗೆ ದಾಖಲೆ ಇಲ್ಲ. ಸಾಕ್ಷಿ ಸ್ವತಃ ಕಾಡುಕುರಿಗಳ ಬಗ್ಗೆ ಗಣತಿ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅರಣ್ಯ ಪ್ರದೇಶದಲ್ಲಿ ಕಾಡುಕುರಿಗಳು ಇದೆ ಎಂಬ ಬಗ್ಗೆ ದಾಖಲೆ ಇಲ್ಲ. ಸುಂಕಸಾಳ ಅರಣ್ಯ ವ್ಯಾಪ್ತಿಯಲ್ಲಿ ಅರಣ್ಯದಲ್ಲಿ ಹಾಗೂ ರಾಷ್ಟ್ರೀಯ ಹೆದ್ದಾರಿಯ ಪರಿಸರದಲ್ಲಿ ಜನವಸತಿ ಮನೆಗಳು ಇವೆ ಎಂದರೆ ಸರಿ. ಆ ಪ್ರದೇಶದಲ್ಲಿ ಸಾಕಷ್ಟು ಮಾಂಸಹಾರಿಗಳು ಇದ್ದಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಆ ಪ್ರದೇಶದ ಜನರಿಗೆ ಮೀನು ತಿನ್ನಬಾರದು, ಕೋಳಿ, ಕುರಿ, ದನ ಮುಂತಾದವುಗಳನ್ನು ಸಾಕಬಾರದು ಎಂದು ನಮ್ಮ

ಇಲಾಖೆಯಿಂದ ನಿರ್ಭಂದ ಇಲ್ಲ ಎಂದರೆ ಸರಿ. ಅದೇ ರೀತಿ ಆ ಸಾಕು ಪ್ರಾಣಿಗಳನ್ನು ಅರಣ್ಯದಲ್ಲಿ ಮೇಯಲು ಬಿಡುತ್ತಾರೆ ಹಾಗೂ ನಮ್ಮ ನಿರ್ಭಂದ ಇಲ್ಲ ಎಂದರೆ ಸಾಕ್ಷಿ ನಮ್ಮ ನಿರ್ಭಂದ ಇದೆ ಹಾಗೂ ಜನರು ಮೇಯಲು ಬಿಡುತ್ತಾರೆ ಎಂದು ನುಡಿಯುತ್ತಾರೆ. ಸಾಕು ಕುರಿ ಹಾಗೂ ನಾನು ಹೇಳುವ ಕಾಡು ಕುರಿ ಒಂದೇ ರೀತಿ ಇರುತ್ತದೆ ಎಂದರೆ ಸರಿಯಲ್ಲ. ಸಾಕು ಕುರಿ ಮತ್ತು ಕಾಡು ಕುರಿಯಲ್ಲಿ ಅದರ ಕೂದಲುಗಳಲ್ಲಿ ವ್ಯತ್ಯಾಸ ಇರುತ್ತದೆ. ಪಂಚನಾಮೆಯಲ್ಲಿ ಹಾಗೂ ನನ್ನ ಹೇಳಿಕೆಯಲ್ಲಿ ನಾನು ಹೇಳುವಂತಹ ಆ ಮಾಂಸವು ಕಾಡು ಕುರಿಯ ಮಾಂಸ ಎಂದು ಅದರ ಕೂದಲನ್ನು ಪರಿಶೀಲಿಸಿ ಹೇಳಿದ್ದು ಎಂದು ಹೇಳಿಲ್ಲ. ನಾನು ಹೇಳುವಂತಹ ಆ ಕಾಡು ಕುರಿ ಯಾವ ಪ್ರದೇಶದ್ದು ಎಂದು ಚೌಕಶಿ ಮಾಡಿದ್ದೇವೆ. ಅರಣ್ಯದಲ್ಲಿ ಇರುವ ಯಾವುದೇ ಪ್ರಾಣಿಗಳು ಮನುಷ್ಯ ಬಂದಾಗ ಓಡಿ ಹೋಗುತ್ತವೆ ಎಂದರೆ ಸರಿ. ಕಾಡುಪ್ರಾಣಿಯನ್ನು ಬೇಟೆಯಾಡಿ ಗುಂಡು ಹಾರಿಸಿದರೂ ಅದು ಬಿದ್ದು ಒದ್ದಾಡಿ ಓಡುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಗುಂಡು ಹಾರಿಸ್ಪಟ್ಟ ಕಾಡು ಪ್ರಾಣಿ ಬಿದ್ದಲ್ಲಿ ಹಾಗೂ ಓಡಿದ್ದಲ್ಲಿ ರಕ್ತ ಚೆಲ್ಲಿ ಎಲೆ , ಹುಲ್ಲು ಹಾಗೂ ನೆಲದ ಮೇಲೆ ಬೀಳುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ಆ ರೀತಿ ರಕ್ತ ಚೆಲ್ಲಿ ಬಿದ್ದಿರುವುದನ್ನು ಕಂಡಿಲ್ಲ.

10. ಮಾಂಸವನ್ನು ಬೇಯಿಸಿದಾಗ ಅದರ ಮೂಲ ಸ್ವರೂಪ ಹೋಗುತ್ತದೆ ಎಂದರೆ ಸರಿ. ನಾನು ಹೇಳುವ ಮಾಂಸವನ್ನು ಕಾಡು ಕುರಿ ಮಾಂಸ ಎಂದು ಫಾರೆನ್ ಸಿಕ್ ಲ್ಯಾಬ್ ವರದಿ ಆಧಾರದಲ್ಲಿ ಹೇಳಿರುವುದು. ಸಾಕ್ಷಿ ಪುನಃ ಆರೋಪಿಗಳು ಕೂಡ ಕಾಡು ಕುರಿ ಮಾಂಸ ಎಂದು ಒಪ್ಪಿದ್ದರು ಎಂದು ನುಡಿಯುತ್ತಾರೆ. ಆರೋಪಿಗಳು ಏನು ಹೇಳಿದರೂ ನಾವು ನಂಬುವುದಿಲ್ಲ. ಮಾಂಸವು ಯಾವ ಪ್ರಾಣಿಯದ್ದು ಎಂದು ಖಾತ್ರಿ ಪಡಿಸುವ ಬಗ್ಗೆ ನಮಗೆ ತರಬೇತಿ ನೀಡಿ ಕಲಿಸಿಲ್ಲ ಎಂದರೆ ಸಾಕ್ಷಿ ಫಾರೆನ್ ಸಿಕ್ ಲ್ಯಾಬ್ ವರದಿ ಮೇಲೆ ಖಾತ್ರಿ ಪಡಿಸುವುದು ಎಂದು ನುಡಿಯುತ್ತಾರೆ. ದಿಃ 23-01-2020 ರಂದು ನಾನು ಹೇಳಿಕೆ ನೀಡಿದೆ ಎಂದು ಹೇಳುವ ಸಂದರ್ಭ ದಲ್ಲಿ ಅಂತಹ ಲ್ಯಾಬ್ ವರದಿ ಬಂದಿಲ್ಲ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನಾನು ಆ ಮಾಂಸವು ಕಾಡುಕುರಿ ಮಾಂಸ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ಮಾಂಸಕ್ಕೆ ಕೂದಲು ಇರಲಿಲ್ಲ. ಹಾಗಾಗಿ ನಾನು ಹೇಳುವಂತಹ ಮಾಂಸವನ್ನು ಯಾವ ಪ್ರಾಣಿಯ ಮಾಂಸ ಎಂದು ಹೇಳುವ ಪರಿಸ್ಥಿತಿಯಲ್ಲಿ ಆ ಮಾಂಸ ಇರಲಿಲ್ಲ ಎಂದರೆ ಸಾಕ್ಷಿ

ಆ ಮಾಂಸದಲ್ಲಿ ಸಿಕ್ಕಿದ ಕೂದಲಿನಿಂದ ಕಾಡು ಕುರಿಯ ಮಾಂಸ ಎಂದು ಹೇಳಿರುವುದು ಎಂದು ನುಡಿಯುತ್ತಾರೆ. ಆ ಕೂದಲು ಜಪ್ತಿ ಪಡಿಸಿದ್ದೇನಾ ಎಂದು ನನಗೆ ನೆನಪಿಲ್ಲ. ನಾನು ಕೂದಲಿನ ಆಧಾರದಲ್ಲಿ ಕಾಡುಕುರಿ ಮಾಂಸ ಎಂದು ಖಾತ್ರಿ ಪಡಿಸಿದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

11. ನಾನು ಹಾಜರು ಪಡಿಸಿದ ನಿಪಿ-3 ರಲ್ಲಿ ಕಾಣುವ ಮಾಂಸದಲ್ಲಿ ಕೂದಲು ಕಾಣುವುದಿಲ್ಲ ಎಂದರೆ ಸರಿ. ನಿಪಿ-6 ರಲ್ಲಿ ಕೂಡ ಕೂದಲು ಇರುವುದು ಕಾಣುವುದಿಲ್ಲ ಎಂದರೆ ಸರಿ. ರಾತ್ರಿ 2-30 ಹೊತ್ತಿಗೆ ಫೋನ್ ಕರೆ ಬಂತು. ಆಗ ನಾನು ಸುಂಕಸಾಳದ ನನ್ನ ವಸತಿ ಗೃಹದಲ್ಲಿದ್ದೆ. ಆ ಸಮಯದಲ್ಲಿ ನಾನು ನಿದ್ದೆಯಲ್ಲಿದ್ದೆ. ನಾನು ತಯಾರಿಯಾಗಿ ಅಲ್ಲಿ ಹೋಗಲು 5 ನಿಮಿಷ ತಗಲಿದೆ. ನಾನು ಅಲ್ಲಿಗೆ ಹೋದೆ ಎನ್ನುವ ಸಂದರ್ಭ ದಲ್ಲಿ ನನ್ನಲ್ಲಿ ಹಾಗೂ ಚಾಸಾ-5 ರಲ್ಲಿ ಮೊಬೈಲ್ ಫೋನ್ ಗಳು ಇತ್ತು. ವಾಹನಗಳಿಗೆ ಕಂಪನಿಯಿಂದ ತಯಾರಿಸ್ಪಟ್ಟ ಟಿಂಟೆಡ್ ಕಪ್ಪು ಬಣ್ಣದ ಗ್ಲಾಸ್ ಗಳು ಹಾಗೂ ಬಿಸಿಲಿನ ತಾಪ ತಡೆಯಲು ಹಾಕಿರುವ ಟಿಂಟೆಡ್ ಫಿಲ್ಮ ಗಳನ್ನು ಅಂಟಿಸಿರುತ್ತಾರೆ ಎಂರದೆ ಸರಿ. ನಾನು ಹೇಳುವಂತಹ ಸ್ಕೊರ್ಪಿಯೋ ವಾಹನದ ಗ್ಲಾಸ್ ಗಳು ಟಿಂಟೆಡ್ ಕಪ್ಪು ಬಣ್ಣದ ಗ್ಲಾಸ್ ಗಳು ಇದ್ದುದರಿಂದ ಆ ವಾಹನದ ಒಳಗಡೆಯ ದೃಶ್ಯ ಕಾಣುವುದಿಲ್ಲ ಎಂದರೆ ಸಾಕ್ಷಿ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಅಲ್ಲದೇ ರಾತ್ರಿ ಯಾಗಿದ್ದುರಿಂದ ಹಾಗೂ ಪೂರ್ಣ ಕತ್ತಲೆ ಇದ್ದುದರಿಂದ ಒಳಗಡೆ ಕಾಣುತ್ತಿರಲಿಲ್ಲ ಎಂದರೆ ಸಾಕ್ಷಿ ನಾವು ಬ್ಯಾಟರಿ ದೀಪದಿಂದ ನೋಡಿದೆವು ಎಂದು ನುಡಿಯುತ್ತಾರೆ. ಬ್ಯಾಟರಿ ಇತ್ತು ಹಾಗೂ ತೆಗೆದುಕೊಂಡು ಹೋಗಲಾಗಿದೆ ಎಂದು ನಾನು ಹೇಳಿಕೆ ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ನೈಟ್ ಡ್ಯೂಟಿ ಯವರ ಬಳಿ ಬ್ಯಾಟರಿ ಇತ್ತು ಎಂದು ನುಡಿಯುತ್ತಾರೆ. ನೈಟ್ ಡ್ಯೂಟಿ ಯವರಲ್ಲಿ ಬ್ಯಾಟರಿ ಇತ್ತು ಎಂದು ಪಂಚನಾಮೆಯಲ್ಲಿ ಹಾಗೂ ನನ್ನ ಹೇಳಿಕೆ ಯಲ್ಲಿ ಹೇಳಿಲ್ಲ. ಆದ್ದರಿಂದ ಅವರ ಬಳಿ ಬ್ಯಾಟರಿ ಇತ್ತು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ವಾಹನದ ಮೇಲೆ ಎಲೆಗಳು ಇತ್ತು ಎಂದು ಹೇಳುವ ಎಲೆಗಳು ಯಾವ ಮರದ್ದು ಎಂದರೆ ಸಾಕ್ಷಿ ಕಾಡುಜಾತಿಯ ಎಲೆಗಳು ಎಂದು ನುಡಿಯುತ್ತಾರೆ. ಕಾಡಿನಲ್ಲಿರುವಂತಹ ಮರಗಳಾದ ಮಾವು, ಸಾಗುವಾಣಿ, ಹಲಸು ಮುಂತಾದವುಗಳನ್ನು ಊರಲ್ಲಿ ಕೂಡ ಜನ ನೆಡುತ್ತಾರೆ ಎಂದರೆ ಸರಿ. ಸ್ಕಾರ್ಪಿಯೋ ವಾಹನದ ಬೋಡಿ ಸ್ಟಿಲ್ ಬೋಡಿ ಎಂದರೆ ಸರಿ. ಸ್ಕಾರ್ಪಿಯೋ ವಾಹನದ ಮೇಲೆ ಬಿದ್ದ ಎಲೆಗಳು ವಾಹನ ಚಾಲನೆಯಲ್ಲಿದ್ದಾಗ ಹಾರಿ

ಹೋಗುತ್ತವೆ ಎಂದರೆ ಸಾಕ್ಷಿ ಹಾರಿ ಹೋಗುತ್ತವೆ, ಆದರೆ ಆ ವಾಹನಗಳ ಬದಿಗೆ ಇರುವ ಬಾರ್ ನಲ್ಲಿ ಇತ್ತು ಎಂದು ನುಡಿಯುತ್ತಾರೆ. ಆ ರೀತಿ ಬಾರ್ ನಲ್ಲಿ ಇತ್ತು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ಮತ್ತು 4 ರಲ್ಲಿ ಕಾಣುವ ವಾಹನಕ್ಕೆ ಬದಿಯಲ್ಲಿ ಬಾರ್ ಕಾಣುವುದಿಲ್ಲ ಎಂದರೆ ಸರಿ. ಅರಣ್ಯ ಗುನ್ಹೆ ಸೃಷ್ಟಿಸಲು ಕಾಡು ಎಲೆಗಳು ಆ ವಾಹನದಲ್ಲಿ ಇತ್ತು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ರಿಂದ 6 ನ್ನು ಈ ಪ್ರಕರಣಕ್ಕೆ ಸೃಷ್ಟಿಸಿದ್ದು ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳಿಂದ ಶಾಹಾಬಾಷಗಿರಿ ಪಡೆಯಲು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ಸೃಷ್ಟಿಸಿದೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಬಲತ್ಕಾರದಿಂದ ಪೊಟೊಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**12.** ನಿಪಿ-3 ರಲ್ಲಿ ಕಾಣುವ ಜಮಖಾನದ ಮೇಲೆ ಕಾಣುವ ವಸ್ತುಗಳು ಯಾವುದೇ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಇರಬಹುದು. ಈ ಪ್ರಕರಣದಲ್ಲಿ ರಕ್ತದ ಮಾದರಿ ತೆಗೆದಿರುವುದಿಲ್ಲ. ರಕ್ತದ ಮಾದರಿ ಇಂತಹ ಪ್ರಕರಣಗಳಲ್ಲಿ ಮಾಂಸದ ಮಾದರಿ ಜೊತೆ ಹೋಲಿಕೆ ಮಾಡಲು ಅವಶ್ಯಕ ಸಾಕ್ಷ್ಯಾ ಎಂದರೆ ಸರಿ. ಆ ರೀತಿ ತೆಗೆದ ರಕ್ತದ ಮಾದರಿಯಲ್ಲಿ ವ್ಯತ್ಯಾಸದ ವರದಿ ಬಂದಾಗ ಆ ಪ್ರಕರಣ ನಡೆದಿಲ್ಲ ಎಂದು ಸಾಬಿತಾಗುತ್ತದೆ ಎಂದರೆ ಸರಿ. ನಿಪಿ-6 ರಲ್ಲಿ ಕುಂಕುಮದ ಬೊಟ್ಟು ಇಟ್ಟು ಈ ಪ್ರಕರಣಕೋಸ್ಕರ ರಕ್ತದ ಕಲೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ರಲ್ಲಿ ಕಾಣುವಂತಹ ಕೆಂಪು ಬಣ್ಣ ನಿಪಿ-6 ರಲ್ಲಿ ಕಾಣುವುದಿಲ್ಲ ಎಂದರೆ ಸರಿ. ನಿಪಿ-5 ಮತ್ತು 6 ರಲ್ಲಿ ಕಾಣುವ ಶೀಟು ಒಂದೇ ಶೀಟಿನ ಎರಡು ಭಾಗಗಳು. ನಿಪಿ-5 ರಲ್ಲಿ ಕಾಣುವ ಚೀಲ ನಿಪಿ-6 ರಲ್ಲಿ ಕಾಣುವ ಕೆಂಪು ಬಣ್ಣದ ಬಳಿ ಬರಬೇಕು ಎಂದರೆ ಸರಿ. ನಿಪಿ-3 ರಿಂದ 6 ಕಚೇರಿಯಲ್ಲಿ ತೆಗೆದ ಪೊಟೊ ಗಳು ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಇಂತಹ ಸಮಯದಲ್ಲಿ , ಇಂತಹ ಎಂಗಲ್ ನಲ್ಲಿ ಪೊಟೊ ತೆಗೆದದ್ದು ಎಂದು ಹೇಳಿಲ್ಲ. ಆರೋಪಿಗಳನ್ನು ಬಲಿ ಪಶು ಮಾಡಲು ಅವುಗಳನ್ನು ಸೃಷ್ಟಿಸಿದ್ದು ಎಂದರೆ ಸರಿಯಲ್ಲ. ಆ ಪೊಟೊಗಳು ನಾನು ಹೇಳುವಂತಹ ಸ್ಥಳದಲ್ಲಿ ತೆಗೆದದ್ದು ಅಲ್ಲ ಹಾಗೂ ಕಚೇರಿಯಲ್ಲಿ ತೆಗೆದದ್ದು ಎಂದರೆ ಸಾಕ್ಷಿ ಒಂದು ಪೊಟೊ ಬಿಟ್ಟು ಉಳಿದವು ಸ್ಥಳದಲ್ಲಿ ತೆಗೆದದ್ದು ಎಂದು ನುಡಿಯುತ್ತಾರೆ. ಆ ಪೊಟೊವನ್ನು ಯಾವುದರಿಂದ ತೆಗೆದದ್ದು ಎಂದು ಹೇಳಿಲ್ಲ. ಅವುಗಳನ್ನು ಯಾವ ಮೂಲದ ಮೂಲಕ ನನ್ನ ಮೇಲಾಧಿಕಾರಿಗೆ ಹಸ್ತಾಂತರಿಸಿದ್ದೇನೆ ಎಂದು ಹೇಳಿಲ್ಲ. ಕ್ಯಾಮೆರಾ ಅಥವಾ ಮೊಬೈಲ್ ವನ್ನು ತೆಗೆದುಕೊಂಡು

ಹೋದ ಬಗ್ಗೆ ಪಂಚನಾಮೆಯಲ್ಲಿ ಹಾಗುಾ ಹೇಳಿಕೆಯಲ್ಲಿ ಹೇಳಿಲ್ಲ. ನಿಪಿ–3 ರಿಂದ 6 ನ್ನು ಪ್ರಿಂಟ್ ಮಾಡಲು ಅದು ಯಾವ ಮೂಲದಲ್ಲಿ ಇತ್ತು ಎಂಬುದು ಬೇಕು ಎಂದರೆ ಸರಿ. ನಿಪಿ–3 ನ್ನು ಯಾವ ಮೂಲದಿಂದ ತಯಾರಿಸಿದ್ದು ಎಂದು ಗೊತ್ತಿಲ್ಲ.

**13.** ಸುಂಕಸಾಳ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತದೆ ಹಾಗೂ ಆ ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲಗಳಲ್ಲಿ ಅಂಗಡಿಗಳು, ಮನೆಗಳು, ದೇವಸ್ಥಾನ, ಚರ್ಚ್ ಮುಂತಾದವು ಗಳು ಇವೆ ಎಂದರೆ ಸರಿ. ನಾನು ಸಾಕಷ್ಟು ವರ್ಷಗಳಿಂದ ಸುಂಕಸಾಳ ಹಾಗೂ ಅಂಕೋಲಾದಲ್ಲಿ ಕರ್ತವ್ಯ ಮಾಡುತ್ತಿರುವುದರಿಂದ ಸಾಕಷ್ಟು ಜನರು ಚಿರಪರಿಚಿತರು ಎಂದರೆ ಸರಿ. ಆದ್ದರಿಂದ ಸಾರ್ವಜನಿಕರನ್ನು ಪಂಚನಾಮೆ ಮಾಡಲು ಬನ್ನಿ ಎಂದು ಕರೆದಾಗ ನನ್ನ ಮಾತನ್ನು ಒಪ್ಪಿಕೊಳ್ಳುವವರು ಇದ್ದಾರೆ ಎಂದರೆ ಸರಿ. ಚಾಸಾ–3 ಮತ್ತು 4 ರವರು ಸುಮಾರು ಪ್ರಕರಣಗಳಲ್ಲಿ ಪಂಚರಾಗಿ ಇದ್ದಾರೆ ಎಂದರೆ ಸರಿ. ಅವರಿಬ್ಬರು ಅನೇಕ ಬಾರಿ ದಿನಗೂಲಿ ನೌಕರರಾಗಿ ಹಾಗೂ ವಾಚಮನ್ ರಾಗಿ ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾರ್ವಜನಿಕರನ್ನು ಕರೆದು ಪಂಚರಾಗಿ ಮಾಡಿದರೆ ನಾವು ಪ್ರಕರಣ ಸೃಷ್ಟಿ ಮಾಡಿರುವುದು ಬೆಳಕಿಗೆ ಬರುತ್ತದೆ ಎಂದು ನಮ್ಮ ಇಲಾಖೆಯಲ್ಲಿ ಕೆಲಸ ಮಾಡುವವರನ್ನು ಪಂಚರನ್ನಾಗಿ ಮಾಡಿರುವುದು ಎಂದರೆ ಸರಿಯಲ್ಲ. ನಾನು ಹೇಳುವಂತಹ ಪಂಚಾಯತಿ ಕಚೇರಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿ ಕೊಂಡು ಇದೆ ಎಂದರೆ ಸರಿ. ಆ ಪ್ರದೇಶದಲ್ಲಿ ಜನರು ಪ್ರಯಾಣಿಸಲು ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಪ್ರಕರಣಯಾಯಿತು ಎಂದು ಹೇಳುವ ದಿವಸ ಅಥವಾ ಮಾರನೆ ದಿನ ನನ್ನ ಹೇಳಿಕೆ ಕೊಡಲು ತೊಂದರೆ ಇರಲಿಲ್ಲ.

**14**. ಮಾಸ್ತಿಕಟ್ಟಾದಲ್ಲಿರುವ ಅರಣ್ಯ ಕಚೇರಿಯ ಅಕ್ಕಪಕ್ಕದಲ್ಲಿ ಸಾಕಷ್ಟು ಮನೆಗಳು ಹಾಗೂ ಅಂಗಡಿಗಳು ಇವೆ ಎಂದರೆ ಸರಿ. ಕುರಿಮಾಂಸ ವನ್ನು ಸುಟ್ಟೆವು ಎಂದು ಹೇಳುವ ಪ್ರದೇಶದ ಮಾಸ್ತಿಕಟ್ಟಾ ನಾವು ಸುಟ್ಟೆವು ಎಂದು ಹೇಳುವ ಸಂಧರ್ಭ ದಲ್ಲಿ ಅಕ್ಕಪಕ್ಕದ ಮನೆಯವರು ಅಥವಾ ಅಂಗಡಿಯವನ್ನು ಪಂಚರಾಗಿ ಕರೆಯಲು ತೊಂದರೆ ಇರಲಿಲ್ಲ. ಬೆಳಿಗ್ಗೆ ಸುಮಾರು 9–00 ಗಂಟೆಗೆ ತೂಕ ಮಾಡುವ ಯಂತ್ರವನ್ನು ತರಲಾಯಿತು. ಅದನ್ನು ಎಲ್ಲಿಂದ ತಂದಿದ್ದು ಎಂದು ಗೊತ್ತಿಲ್ಲ. ಸಾಮಾನ್ಯವಾಗಿ ಅಂತಹ ಯಂತ್ರಗಳು ಅಂಗಡಿಯಲ್ಲಿ ಮಾತ್ರ

ಸಿಗುತ್ತದೆ ಎಂದರೆ ಸರಿ. ತೂಕ ಮಾಡುವಾಗ ಮತ್ತು ಮಾಂಸವನ್ನು ಸುಟ್ಟೆವು ಎಂದು ಹೇಳುವ ಸಂದರ್ಭ ದಲ್ಲಿ ಪೋಟೊ ತೆಗೆಯಲು ತೊಂದರೆ ಇರಲಿಲ್ಲ. ತೂಕ ಮಾಡಿದೆವು ಹಾಗೂ ಸುಟ್ಟು ಹಾಕಿದೆವು ಎಂದು ಕಾಗದದ ಮೇಲೆ ಸೃಷ್ಟಿಸಿಕೊಂಡಿದ್ದು ವಿನಃ ಆ ರೀತಿಯ ಕ್ರಮ ಮಾಡಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನಾನು ಹೇಳುವಂತಹ ಸ್ಕಾರ್ಪಿಯೋ ವಾಹನವನ್ನು ಚಾಲನೆ ಮಾಡಿರುವುದನ್ನು ನಾನು ನೋಡಿಲ್ಲ. ಅದೇ ರೀತಿ ಆರೋಪಿಗಳು ನಾನು ಹೇಳುವಂತಹ ಮಾಂಸವನ್ನು ಸಾಗಾಟ ಮಾಡಿದರು ಎಂದು ಹೇಳಲು ಯಾವುದೇ ದಾಖಲೆ ಇಲ್ಲ. ಗಣಪತಿ ಶೇಟ್ ರವನ್ನು ವಿಚಾರಣೆ ಮಾಡಿಲ್ಲ. ನಾರಾಯಣ ಮಹಾಬಲೇಶ್ವರ ಶೇಟ್ ರವರು ಸುಂಕಸಾಳ ದವರಾಗಿದ್ದು ನನಗೆ ಕರೆಸಿದ್ದಾರೆ. ಅವರನ್ನು ಹಾಗೂ ಅವರ ಮನೆಯವರನ್ನು ಅವರ ಮನೆಯಲ್ಲಿ ಮಾಂಸ ಬೇಯಿಸಿದ್ದೀರಾ ಎಂಬ ಬಗ್ಗೆ ವಿಚಾರಣೆ ಮಾಡಿಲ್ಲ. ಮಟನ್ ಮತ್ತು ಚಿಕನ್ ಅಡುಗೆ ಸಲುವಾಗಿ ಬೇಯಿಸಿದಾಗ ಅದರ ಪರಿಮಳ ಹೊರಗೆ ಬರುತ್ತದೆ ಎಂದರೆ ಸರಿ. ಸದ್ರಿ ನಾರಾಯಣ ಮಹಾಬಲೇಶ್ವರ ಶೇಟ್ ರವರ ಮನೆ ಕಡೆಯಿಂದ ಊಟ ಮಾಡಿ ಬರುತ್ತಿದ್ದರು ಎಂದು ಈ ಪ್ರಕರಣ ಸೃಷ್ಟಿಸಲು ಸುಳ್ಳು ಹೇಳಿದ್ದು ಎಂದರೆ ಸರಿಯಲ್ಲ. ನಾರಾಯಣ ಮಹಾಬಲೇಶ್ವರ ಶೇಟ್ ಹಾಗೂ ಆರೋಪಿ 1 ಮತ್ತು 3 ರವರು ದೈವಜ್ಞ ಬ್ರಾಹ್ಮಣ ರಾಗಿರುವುದರಿಂದ ಮಾಂಸಹಾರಿಗಳಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

**15.** 2 ನೇ ಪಂಚರನ್ನು ಕರೆಯಲು ಹೋದಾಗ ಅರ್ಧ ಗಂಟೆ ತಗಲಿದೆ. ಇಬ್ಬರು ಪಂಚರನ್ನು ಕರೆದುಕೊಂಡು ಸ್ಥಳಕ್ಕೆ ಬಂದಾಗ ಬೆಳಗಿನ ಜಾವ 3-30 ಆಗಿರಬಹುದು. ಅವರನ್ನು ಕರೆಯಲು ಯಾವ ವಾಹನದಲ್ಲಿ ಹೋಗಿದ್ದು ಎಂದು ನಮೂದು ಮಾಡಿಲ್ಲ. ನನ್ನಲ್ಲಿ ಬೈಕ್ ಇದೆ. ಪಂಚರನ್ನು ಕರೆಯಲು ನಡೆದುಕೊಂಡು ಹೋಗಿದ್ದೆ. ನಾನು ಹೇಳುವ ಸ್ಥಳದ ಪಕ್ಕದಲ್ಲಿರುವ ಮನೆಯವರನ್ನೆ ಪಂಚರಾಗಿ ಕರೆಯಬಹುದಿತ್ತು. ನಾನು ಹಾಗೂ ನನ್ನ ಅಧಿಕಾರಿಗಳು ಸೇರಿ ಈ ಪ್ರಕರಣವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸಾಕ್ಷಿ ಹೇಳಿಕೆಗಳನ್ನು, ಪಂಚನಾಮೆಯನ್ನು, ಪೊಟೊಗಳನ್ನು ಹಾಗೂ ಮುದ್ದೆಮಾಲುಗಳನ್ನು ಸೃಷ್ಟಿಸಿಕೊಂಡದ್ದು ಎಂದರೆ ಸರಿಯಲ್ಲ. ಆರೋಗಪಿಳು ನಿರಪರಾಧಿಗಳು ಹಾಗೂ ಪ್ರಕರಣ ದಾಖಲಿಸಲು ಹಾಗೂ ದ್ವೇಷ ಸಾಧಿಸಲು ಅವರ ವಿರುದ್ಧ ಈ ಸುಳ್ಳು ಪ್ರಕರಣ ದಾಖಲಿಸಿದ್ದು ಎಂದರೆ ಸರಿಯಲ್ಲ. ಇದಕ್ಕೆ ಪೂರಕವಾಗಿ ನಾನು

ಹಾಜರು ಪಡಿಸಿದ ಮುದ್ದೆ ಮಾಲುಗಳನ್ನು ಸೃಷ್ಟಿಸಿದ್ದು ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಯಾವುದೇ ಕೃತ್ಯವನ್ನು ಆರೋಪಿಗಳು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತಹ ಮಾಂಸ ಕಾಡುಕುರಿ ಮಾಂಸ ಅಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.